ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ28–03–2026 ರಂದು ಬೊಧಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎಸ್ ಎಚ್ ವಕೀಲರಿಂದಃ

ನಾನು ಸರ್ವೆ ನಂ 60 ಕ್ಕೆ ಸಂಬಂದಿಸಿದಂತೆ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ನಾನು 19 ಗುಂಟೆ ಕ್ಷೇತ್ರಕ್ಕೆ ಸಂಬಂದಿಸಿದಂತೆ ಸಲ್ಲಿಸಿರುತ್ತೇನೆ. ಸರ್ವೆ ನಂ 60 ರ ಒಟ್ಟು ಕ್ಷೇತ್ರ 38 ಗುಂಟೆ ಇರುತ್ತದೆ. ಸದರಿ ಸರ್ವೆ ನಂಬರನಲ್ಲಿ ರಾಮಚಂದ್ರ ವೆಂಕಟಸುಬ್ಬ ಹೆಗಡೆ ರವರಿಗೆ 19 ಗುಂಟೆ ಕ್ಷೇತ್ರಕ್ಕೆ ಹಕ್ಕು ಇರುತ್ತದೆಯಾ ? ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 60 ಕ್ಕೆ ಸಂಬಂದಿಸಿದಂತೆ ಪೊಡಿ ಆಗಿರುತ್ತದೆಯೇ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೊಡಿ ಪ್ರಕ್ರಿಯೆ ನಡೆಯತ್ತಿದೆ ಎಂದು ನುಡಿಯುತ್ತಾರೆ. ವಾದ ಪತ್ರದ ಜೊತೆ ನೀವು ಸರ್ವೆ ನಂ 60 ರ ಕಚ್ಚಾ ನಕಾಶೆಯನ್ನು ಸಲ್ಲಿಸಿರುತ್ತಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಸದರಿ ಕಚ್ಚಾ ನಕಾಶೆಯಲ್ಲಿ ಸರ್ವೆ ನಂ 60 ರ ಪೂರ್ತಿ ನಕಾಶೆಯನ್ನು ತೋರಿಸಿರುತ್ತಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ದಾವಾಸ್ವತ್ತಿನ ಚೆಕ್ಕು ಬಂದಿಯನ್ನು ನೀವು ವಾದ ಪತ್ರದಲ್ಲಿ ನಮೂದು ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಆ ರೀತಿ ದಾವಾಸ್ವತ್ತಿನ ಚೆಕ್ಕು ಬಂದಿಯನ್ನು ನಿಮ್ಮ ವಾದ ಪತ್ರದಲ್ಲಿ ನಮೂದು ಮಾಡಲು ನಿಮಗೆ ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ.

ಕಚ್ಚಾ ನಕಾಶೆಯಲ್ಲಿ ನೀವು ನಿಮ್ಮ ವೈವಾಟಿಯಲ್ಲಿರುವ ಜಮೀನನ್ನು ತೋರಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ನನಗೆ ದಾವಾ ಸ್ವತ್ತಿನ ಚೆಕ್ಕು ಬಂದಿ ಹೇಳಲು ಬರುತ್ತದೆ. ಪೂರ್ವಕ್ಕೆ ಸರ್ವೆ ನಂ 75 ರ ಬೆಟ್ಟ ಇರುತ್ತದೆ. ಪಶ್ಚಿಮಕ್ಕೆ ಸರ್ವೆ ನಂ 58/1 ಬ ರ ಜಮೀನು ಇರುತ್ತದೆ. ಉತ್ತರಕ್ಕೆ ಸರ್ವೆ ನಂ 59/3 ರ ಜಮೀನು ಇರುತ್ತದೆ. ದಕ್ಷಿಣಕ್ಕೆ ಸರ್ವೆ ನಂ 60 ರ ಉಳಿದ ಭಾಗ ಇರುತ್ತದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಸಮಯವನ್ನು ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.)

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

ಸಿವಿಲ್ ನ್ಯಾಯಾಧೀಶರು ಸಿದ್ದಾಪುರ